
ವಿವರವಿದೆ. ಕಾಣುವ ಚಾಟಿ, ಕಾಣದ ಚಾಟಿ ಎರಡನ್ನೂ ಇದು ಧ್ವನಿಸುತ್ತದೆ. ತಿಮ್ಮಕ್ಕನ ಕಥೆ ಹುಟ್ಟಿದಾರಭ್ಯ ಎಲ್ಲ ಬಗೆಯ ಚಾವಟಿ ಏಟುಗಳನ್ನು ತಿನ್ನುತ್ತಲೇ ಇರುವ ಬುಡಕಟ್ಟು ಹೆಣ್ಣುಗಳ ಪ್ರಾತಿನಿಧಿಕ ನಿರೂಪಣೆ.

'ರಾಗಿತೆನೆ'ಯ ಓದು ಹಲವು ಆಯಾಮಗಳನ್ನು ಒಟ್ಟಿಗೇ ಕಾಣಿಸುತ್ತದೆ. ಮಗ ಮತ್ತು ತಾಯಿಯ ಸಂಬಂಧದ ಎಳೆಗಳ ಹೆಣಿಗೆಯಾಗಿ, ಭಾರತದ ಎನ್ನುವಂತೆ ಕಂಡರೂ ಜಗತ್ತಿನಾದ್ಯಂತ ಅದೆಷ್ಟೋ ಸಮುದಾಯಗಳಲ್ಲಿ ಇರಬಹುದಾದ, ಹೆಣ್ಣಿನ ಬದುಕನ್ನು ನಿತ್ಯ ನರಕವಾಗಿಸುವ ಅಮಾನವೀಯ ಧೋರಣೆಗಳು, ಬಿಡುಗಡೆಯ ದಾರಿ ಹಿಡಿಯುತ್ತಿರುವ ಹೊತ್ತಿನಲ್ಲೂ ಬುಡಕಟ್ಟು ವರ್ಗ ಎದುರಿಸುವ ಆರ್ಥಿಕ, ಸಾಮಾಜಿಕ ಸಂಕಷ್ಟಗಳು, ವೈದ್ಯಕೀಯ ಕ್ಷೇತ್ರದ ನಾಕ ನರಕಗಳು, ಸುತ್ತಿ ಸುಳಿದು ಹೆಳವಾಗುತ್ತಿರುವ ಸಾಮಾಜಿಕ ಸನ್ನಿವೇಶಗಳು, ಬಿಟ್ಟೆನೆಂದರೂ ಬಿಡದ ಕೌಟುಂಬಿಕ ದೌರ್ಜನ್ಯಗಳು, ಈ ಎಲ್ಲವಕ್ಕೂ ಏಕಮೇವ ಆಕರವಾದ ಹೆಣ್ಣು ಜೀವ... ಇವುಗಳೆಲ್ಲವನ್ನೂ ಕಲಸನ್ನದ ರೀತಿಯಲ್ಲಿ ಈ ಕೃತಿ ನಮ್ಮೆದುರಿಗೆ ಇಡುತ್ತದೆ.

ಈ ಎಲ್ಲ ದಾರುಣ ಚಿತ್ರಗಳ ಮೆರವಣಿಗೆಯಂತಿರುವ ಈ ಕೃತಿಯಲ್ಲಿ ಮಹಾ ನಾಯಕಿಯಂತೆ ತಿಮ್ಮಕ್ಕ ಕಾಣಿಸುತ್ತಾರೆ. ದುರಂತ ನಾಯಕಿಯಂತೆ ಕಂಡರೂ ಬಲಿಪಶುವಿನಂತೆ ಕಾಣುತ್ತಿರುವಾಗಲೂ ಆಕೆಯನ್ನು ಹಾಗೆ ಕರೆಯಲು ನನ್ನ ಮನಸ್ಸು ಒಪ್ಪುವುದಿಲ್ಲ. ಏಕೆಂದರೆ, ಮುಖಕ್ಕೆ ಮುಖವೇ ಕಲಸಿಹೋಗಿ, ಮೂಗೆಲ್ಲಿ, ಬಾಯೆಲ್ಲಿ ಎನ್ನುವುದೇ ಕಾಣಿಸದಂತೆ ಮುಖ ವಿರೂಪಗೊಂಡಾಗಲೂ, ಮುಖದ ತುಂಬಾ ಹುಳುಗಳು ಹರಿದಾಡುತ್ತಾ, ರಕ್ತ ಸೋರುತ್ತಾ ಇರುವಾಗಲೂ, ತನ್ನದೇ ಮೈಯ ನಾತ ತನಗೇ ಕಷ್ಟವಾಗುತ್ತಿರುವಾಗಲೂ ಈ ಮಹಾಹೆಣ್ಣು ಬದುಕನ್ನು ದ್ವೇಷಿಸುವುದಿಲ್ಲ. ಬದುಕಬೇಕೆನ್ನುವ ಆಸೆಯನ್ನು ಕೈಬಿಡುವುದಿಲ್ಲ. ಆಗಲೂ ತನ್ನನ್ನು ಉಳಿಸಿಕೊಳ್ಳುವಂತೆ ಮಕ್ಕಳನ್ನು, ಕೊನೆಗೆ ದಾರಿಹೋಕರನ್ನೂ ಬೇಡುತ್ತಾಳೆ. ಇದನ್ನು ಅನಿಮಲ್ ಇನ್‌ಸ್ಟಿಂಕ್ಟ್ ಎಂದು ಕರೆದು




ರಾಗಿತೆನೆ (ಬುಡಕಟ್ಟು ಹೆಣ್ಣೊಬ್ಬಳ ಬಾಳಗಾಥೆ)
ಲೇ: ಜಿ.ಎನ್. ಧನಂಜಯಮೂರ್ತಿ
ಪು: 124; ಬೆ: ರೂ. 150
ಪ್ರ: ಅಹರ್ನಿಶಿ, ಶಿವಮೊಗ್ಗ
ಫೋನ್: 9449174662

ಮುಗಿಸಿಬಿಡಲಾಗುವುದಿಲ್ಲ. ಬದುಕಬೇಕೆಂಬ ದುರ್ದಮ್ಯವಾದ ಆಸೆ ಹಾಗೂ ಅದಕ್ಕಾಗಿ ನಡೆಸಬೇಕಾದ ನಿರಂತರ ಹೋರಾಟ, ಎರಡೂ ಮನುಷ್ಯನಿಗೆ ಪ್ರಕೃತಿಯಿಂದ ಬಂದ ಬಳುವಳಿ ಎನ್ನುವ 'ಯಯಾತಿ' ಕಾದಂಬರಿಯ ಕಚನ ಮಾತನ್ನು ಮೀರಿದ ವ್ಯಕ್ತಿತ್ವ ಈಕೆಯದು.

ತಿಮ್ಮಕ್ಕನ ಈ ಧೋರಣೆಯನ್ನು ಹೆಣ್ಣಿನ ಶಕ್ತಿಕೇಂದ್ರ ಎನ್ನಬೇಕು. ಬದುಕನ್ನು ಯಾವೆಂಥ ದಾರುಣತೆಯಲ್ಲೂ ನಿರಾಕರಿಸದ, ಬಿಟ್ಟುಕೊಡದ, ಮತ್ತೂ ಮತ್ತೂ ಅದನ್ನು ಉಳಿಸಿಕೊಳ್ಳಲು ಹೆಣ್ಣು ನಡೆಸುವ ಈ ಅಹೋರಾತ್ರಿಯ, ನಿದ್ದೆ-ಎಚ್ಚರಗಳ ಮನೋವಿನ್ಯಾಸವೇ ಅವಳನ್ನು ಗಂಡಿನಿಂದ